ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ 208 ವರ್ಗಾವಣೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:22-04-2017

# ಸುತ್ತೋಲೆ

ವಿಷಯ: 2017-18ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ ಗ್ರಂಥಪಾಲಕರು/ದೈಹಿಕ ಶಿಕ್ಷಣ ಶಿಕ್ಷಕರು/ಬೋಧಕೇತರ ವರ್ಗಾವಣೆಯ ಬಗ್ಗೆ.

*****

2017-18ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆ ಪಡೆದಿರುವ ಪ್ರಕಾರ ವರ್ಗಾವಣೆ ಪ್ರಕ್ರಿಯೆಯನ್ನು ಈ ಕೆಳಗೆ ವಿವರಿಸಲಾಗಿರುವಂತೆ ಕೈಗೊಳ್ಳಲಾಗುವುದು.

1. ಇಲಾಖೆಯಡಿಯಲ್ಲಿಯ ಕಾಲೇಜು/ಕಛೇರಿಗಳನ್ನು ವರ್ಗಾವಣೆ ಅಧಿನಿಯಮದನುಸಾರವಾಗಿ ಎ, ಬಿ, ಸಿ ವಲಯಗಳಲ್ಲಿ ವಿಂಗಡಿಸಲಾಗಿರುತ್ತದೆ. ಅಧಿನಿಯಮದನುಸಾರವಾಗಿ ಮಂಜೂರಾಗಿರುವ ವೃಂದ ಬಲದ ಗರಿಷ್ಠ 8% ರಷ್ಟು ವರ್ಗಾವಣೆಗಳನ್ನು ಮಾಡಬಹುದಾಗಿರುತ್ತದೆ. ಅದರಂತೆ 4% ಕಡ್ಡಾಯ ವರ್ಗಾವಣೆ ಹಾಗೂ 4% ಕೋರಿಕೆ ವರ್ಗಾವಣೆಗಳನ್ನು ಮಾಡಲಾಗುವುದು. ಆ ಪ್ರಕಾರವಾಗಿ, ಸದರಿ ವಲಯಗಳಲ್ಲಿ ಮಂಜೂರಾದ ಹುದ್ದೆಗಳ ಶೇ.4 ರಷ್ಟು ಪ್ರಮಾಣದ ಸಿಬ್ಬಂದಿಗಳನ್ನು **(ಅನುಬಂಧ-ಐ)** ಅವರುಗಳು ಆಯಾ ವಲಯದಲ್ಲಿ ಸಲ್ಲಿಸಿರುವ ಸತತ ಸೇವೆಯ ಜೇಷ್ಠತೆಯ ಆಧಾರದ ಮೇಲೆ ಕಡ್ಡಾಯವಾಗಿ ವರ್ಗಾಯಿಸಲು ಕ್ರಮಕೈಗೊಂಡು ಇದರಿಂದ ಖಾಲಿಯಾಗುವ ಹುದ್ದೆಗಳನ್ನು ಹಾಗೂ ಈಗಾಗಲೇ ಖಾಲಿಯಿರುವ (ಕಲಾ,ವಾಣಿಜ್ಯ ವಿಷಯಗಳಲ್ಲಿ ಕನಿಷ್ಟ 12 ತಾಸುಗಳು ಹಾಗೂ ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ ಕನಿಷ್ಟ 16 ತಾಸುಗಳ ಕಾರ್ಯಭಾರವಿರುವ ಮಂಜೂರಾದ ಖಾಲಿ ಹುದ್ದೆಗಳು) ಹುದ್ದೆಗಳನ್ನು ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪ್ರದರ್ಶಿಸಲಾಗುವುದು.

2. ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ವಲಯವನ್ನು ಹೊರತುಪಡಿಸಿ ಉಳಿದೆರಡು ವಲಯಗಳಲ್ಲಿ ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗುವುದು. ಇನ್ನೆರಡು ವಲಯಗಳಲ್ಲಿ **ಹುದ್ದೆಗಳು ಮಂಜೂರಾಗಿಲ್ಲದ ಪಕ್ಷದಲ್ಲಿ ಮಾತ್ರ** ಸಿಬ್ಬಂದಿಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವಲಯದಲ್ಲಿಯೇ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು.

3. ಮೊದಲು ಕಡ್ಡಾಯವಾಗಿ ವರ್ಗಾವಣೆಗೊಳ್ಳುತ್ತಿರುವ ಸಿಬ್ಬಂದಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಿ ತದ ನಂತರದಲ್ಲಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಣ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳಿಗೆ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಕಡ್ಡಾಯವಾಗಿ ವರ್ಗಾಯಿಸುವ ಸಿಬ್ಬಂದಿಗಳು ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳದಿದ್ದ/ಕೌನ್ಸೆಲಿಂಗ್‌ಗೆ ಹಾಜರಾಗದಿದ್ದ ಪಕ್ಷದಲ್ಲಿ ಅವರುಗಳನ್ನು ಸ್ಥಳ ನಿಯುಕ್ತಿಗೊಳಿಸಲು ಆಯುಕ್ತಾಲಯದ ಹಂತದಲ್ಲಿ ಕ್ರಮಕೈಗೊಳ್ಳಲಾಗುವುದು. ಕಡ್ಡಾಯವಾಗಿ ವರ್ಗಾಯಿಸಲಾಗುತ್ತಿರುವ ಸಿಬ್ಬಂದಿಗಳಲ್ಲಿ ಎ ವಲಯದಲ್ಲಿರುವ ಸಿಬ್ಬಂದಿಗಳಿಗೆ ಮೊದಲು ಕೌನ್ಸಿಲಿಂಗ್ ನಡೆಸಿ ತದ ನಂತರದಲ್ಲಿ ಕ್ರಮವಾಗಿ ಬಿ & ಸಿ ವಲಯಗಳ ಸಿಬ್ಬಂದಿಗಳಿಗೆ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಈ ಪ್ರಕಾರವಾಗಿ ಕಡ್ಡಾಯವಾಗಿ ವರ್ಗಾವಣೆ ಮಾಡುವಾಗ ನಿವೃತ್ತಿಗೆ 2 ವರ್ಷಗಳಿರುವ ಸಿಬ್ಬಂದಿಗಳನ್ನು ಅಂದರೆ ದಿನಾಂಕ:31-03-2019ರೊಳಗಾಗಿ ವಯೋ ನಿವೃತ್ತಿ ಹೊಂದುತ್ತಿರುವ ಸಿಬ್ಬಂದಿಗಳನ್ನು ಹೊರತುಪಡಿಸಲಾಗುವುದು. ಸದರಿ ಕಡ್ಡಾಯ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ನೀಡಲಾಗಿರುವ ಮಾರ್ಗ ಸೂಚಿಗಳನ್ವಯ ಹಾಗೂ ಅದರಲ್ಲಿ ವಿಧಿಸಲಾಗಿರುವ ಗರಿಷ್ಠ ಮಿತಿಗಳೊಳಪಟ್ಟು ಆದ್ಯತೆ ನೀಡಲಾಗುವುದು. ಪತಿ/ಪತ್ನಿ ಪ್ರಕರಣಗಳಲ್ಲಿ ರಾಜ್ಯ ಸರ್ಕಾರಿ, ಕೇಂದ್ರ ಸರ್ಕಾರಿ ಸಿಬ್ಬಂದಿಗಳಾಗಿದ್ದಲ್ಲಿ ಪರಿಗಣಿಸಲಾಗುವುದು.

4. ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಣ ಶಿಕ್ಷಕರು/ ಬೋಧಕೇತರ ಸಿಬ್ಬಂದಿಗಳಲ್ಲಿ ಮೊದಲಿಗೆ ಸಿ ವಲಯದ ಸಿಬ್ಬಂದಿಗಳಿಗೆ ನಂತರದಲ್ಲಿ ಕ್ರಮವಾಗಿ ಬಿ ಹಾಗೂ ಎ ವಲಯದ ಸಿಬ್ಬಂದಿಗಳಿಗೆ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಉಳಿದಂತೆ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ನೀಡಲಾಗಿರುವ ಮಾರ್ಗ ಸೂಚಿಗಳನ್ವಯ ಹಾಗೂ ಅದರಲ್ಲಿ ವಿಧಿಸಲಾಗಿರುವ ಗರಿಷ್ಠ ಮಿತಿಗಳೊಳಪಟ್ಟು ಆದ್ಯತೆ ನೀಡಲಾಗುವುದು.

ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುವ ಇಲಾಖೆಯ ಎ. ಬಿ. ಸಿ ವಲಯಗಳಲ್ಲಿನ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಆಯಾ ವಲಯಗಳಲ್ಲಿ ಸತತವಾಗಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಕಡ್ಡಾಯ ವರ್ಗಾವಣೆಗೆ ತಯಾರಿಸಲಾಗಿರುವ ಜೇಷ್ಠತಾ ಪಟ್ಟಿಯನ್ನು (ಹೈದ್ರಾಬಾದ್ ಕರ್ನಾಟಕ ಪ್ರದೇಶ ಹಾಗೂ ರಾಜ್ಯದ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ) ಬೋಧಕ ವರ್ಗದವರಿಗೆ ಸಂಬಂಧಿಸಿದಂತೆ **ಅನುಬಂಧ-ಎ(1, 2, 3)ರಲ್ಲಿ** ಗ್ರಂಥಪಾಲಕರಿಗೆ ಸಂಬಂಧಿಸಿದಂತೆ **ಅನುಬಂಧ-ಬಿ(1, 2, 3)ರಲ್ಲಿ** ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದಂತೆ **ಅನುಬಂಧ-ಸಿ(1, 2, 3)ರಲ್ಲಿ** ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ **ಅನುಬಂಧ-ಡಿ (1, 2, 3)** ರಲ್ಲಿ ಪ್ರಕಟಿಸಲಾಗಿದೆ. ವಲಯದಲ್ಲಿ ಮಾಡಬಹುದಾದ ಗರಿಷ್ಠ ವರ್ಗಾವಣೆ ಮಿತಿಗಿಂತ 1:2 ದರದಲ್ಲಿ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು. ದಿ. 31/03/2019ರೊಳಗಾಗಿ ನಿವೃತ್ತಿ ಹೊಂದುತ್ತಿರುವ ಸಿಬ್ಬಂದಿಗಳನ್ನು ಹೊರತುಪಡಿಸಲಾಗಿದೆ. ಸದರಿ ಪಟ್ಟಿಯನ್ನು ಪರಿಶೀಲಿಸಿ ದಿನಾಂಕ:27-04-2017ರೊಳಗೆ ನ್ಯೂನತೆಗಳನ್ನು ಇಎಂಐಎಸ್ ನಲ್ಲಿ ಸಿಬ್ಬಂದಿ Profile ನಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಕಾಲೇಜಿನ ಹಂತದಲ್ಲಿಯೇ ಸರಿಪಡಿಸಿಕೊಳ್ಳಬೇಕಾಗಿದ್ದು. ಈ ಬಗ್ಗೆ ಕೇಂದ್ರಕಛೇರಿಗೆ **E-mail Id: dce.transfers2017@gmail.com** ಗೆ ಪ್ರಾಂಶುಪಾಲರ ಮೂಲಕ ಮಾಹಿತಿ ನೀಡಿದಲ್ಲಿ, ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗುವುದು. ಬೋಧಕರು, ಗ್ರಂಥಪಾಲಕರು, ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ಸಂಬಂಧಿಸಿದಂತೆ, ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಸಿಬ್ಬಂದಿಗಳ ಹಂಚಿಕೆ ಪ್ರಕ್ರಿಯೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತಡೆಯಾಜ್ಞೆ ಇರುವ ಕಾರಣ ಪೂರ್ಣಗೊಂಡಿಲ್ಲವಾದ್ದರಿಂದ ಪ್ರಸ್ತುತ ಹೈ-ಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಲಿಚ್ಛಿಸಿರುವ ಸಿಬ್ಬಂದಿಗಳಿಗೆ 6 ಜಿಲ್ಲೆಗಳಲ್ಲಿ ಮಾತ್ರ ವರ್ಗಾವಣೆಯನ್ನು ಮಾಡಲಾಗುವುದು. ರಾಜ್ಯ ಉಳಿಕೆ ವೃಂದಕ್ಕೆ ಸೇರಲಿಚ್ಛಿಸಿರುವ ಸಿಬ್ಬಂದಿಗಳು ಪ್ರಸ್ತುತ ಪ್ರಕಟಿಸಲಾಗಿರುವ ಹೈ-ಕ ಜ್ಯೇಷ್ಠತಾ ಪಟ್ಟಿಯಲ್ಲಿ ಸೇರಿದ್ದಲ್ಲಿ, ಆಕ್ಷೇಪಣೆಯನ್ನು ದಿನಾಂಕ:28-04-2017 ರೊಳಗಾಗಿ **E-mail Id: dce.transfers2017@gmail.com** ಗೆ ಸಲ್ಲಿಸತಕ್ಕದ್ದು. ದಿನಾಂಕ:28-04-2017 ರಂದು ಇಎಂಐಎಸ್ ನಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು. ದಿನಾಂಕ:28-04-2017ರ ನಂತರದಲ್ಲಿ ಜೇಷ್ಠತಾ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

Profile Updation ನಲ್ಲಿ ಯಾವುದೇ ತಪ್ಪುಗಳನ್ನು ಮಾಡಿರುವುದು ಇಲಾಖೆಯ ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳನ್ನು ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತು ಕ್ರಮಕೈಗೊಳ್ಳಲಾಗುವುದು.

ಅದೇ ರೀತಿಯಲ್ಲಿ ಎ, ಬಿ, ಸಿ ವಲಯಗಳಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಕಲಾ, ವಾಣಿಜ್ಯ ವಿಷಯಗಳಲ್ಲಿ ಕನಿಷ್ಠ 12 ತಾಸುಗಳು ಹಾಗೂ ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ ಕನಿಷ್ಠ 16 ತಾಸುಗಳ ಕಾರ್ಯಭಾರವಿದ್ದಲ್ಲಿ (ಇಎಂಐಎಸ್ ತಂತ್ರಾಂಶದಲ್ಲಿ ಕಾಲೇಜುಗಳಿಂದ ನಮೂದು ಮಾಡಲಾಗಿರುವಂತೆ) ಅಂತಹ ಹುದ್ದೆಗಳನ್ನು ವರ್ಗಾವಣೆಗೆ ಪರಿಗಣಿಸಲಾಗುವುದು. ಸದರಿ ಹುದ್ದೆಗಳ ವಲಯವಾರು ವಿವರಗಳನ್ನು ಈ ಸುತ್ತೋಲೆಯ **ಅನುಬಂಧ-ಇ(1, 2, 3)ರಲ್ಲಿ** ಬೋಧಕ ಖಾಲಿ ಹುದ್ದೆಗಳ ಮಾಹಿತಿಯನ್ನು **ಅನುಬಂಧ-ಎಫ್**(1, 2, 3) ಗಳಲ್ಲಿ ಬೋಧಕೇತರ ಖಾಲಿ ಹುದ್ದೆಗಳ ಮಾಹಿತಿಯನ್ನು, ಖಾಲಿ ಹುದ್ದೆ ಮಾಹಿತಿಯನ್ನು ಪ್ರಕಟಿಸಲಾಗಿದೆ. ಸದರಿ ಪಟ್ಟಿಯನ್ನು ಪರಿಶೀಲಿಸಿ ದಿನಾಂಕ:28-04-2017 ರೊಳಗೆ ನ್ಯೂನತೆಗಳನ್ನು ಇಎಂಐಎಸ್ ನಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಕಾಲೇಜಿನ ಹಂತದಲ್ಲಿಯೇ

ಸರಿಪಡಿಸಿಕೊಳ್ಳಬೇಕಾಗಿದ್ದು, ಮಂಜೂರಾದ ಹುದ್ದೆಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:28-04-2017 ರೊಳಗಾಗಿ ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ದಾಖಲಾತಿಗಳ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಕೇಂದ್ರಕಛೇರಿಗೆ **E-mail Id:dce.transfers2017@gmail.com** ಗೆ ಪ್ರಾಂಶುಪಾಲರ ಮೂಲಕ ಮಾಹಿತಿ ನೀಡಿದಲ್ಲಿ, ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗುವುದು. ದಿನಾಂಕ:28-04-2017ರಂದು ಇಎಂಐಎಸ್ ನಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಅಂತಿಮ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. ದಿನಾಂಕ: 28-04-2017ರ ನಂತರದಲ್ಲಿ ಖಾಲಿ ಹುದ್ದೆಗಳ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

22/4/17

ಕಾಲೇಜು ಶಿಕ್ಷಣ ಆಯುಕ್ತರು

DCE 208 Circular-1

Anexure-I

## Zone wise Teaching and Non Teaching Sanctioned Post Details

| Sl.No | Cader | A Zone | | | | B Zone | | | | C Zone | | | |
|---|---|---|---|---|---|---|---|---|---|---|---|---|---|
| | | San post | 4% of San post | HK | 4% of San post | San post | 4% of San post | HK | 4% of San post | San post | 4% of San post | HK | 4% of San post |
| 1 | Lecturers | 3147 | 126 | 514 | 21 | 1914 | 77 | 439 | 18 | 1069 | 43 | 174 | 7 |
| 2 | Librarians | 87 | 3 | 20 | 1 | 116 | 5 | 30 | 1 | 95 | 4 | 15 | 1 |
| 3 | PCI | 108 | 4 | 19 | 1 | 108 | 4 | 25 | 1 | 78 | 3 | 10 | 0 |
| 4 | Manager | 72 | 3 | 12 | 01 | 32 | 1 | 7 | 0 | 20 | 1 | 2 | 0 |
| 5 | Superintendent | 170 | 7 | 18 | 1 | 111 | 4 | 18 | 1 | 75 | 3 | 8 | 0 |
| 6 | FDA | 197 | 8 | 23 | 1 | 147 | 6 | 32 | 1 | 100 | 4 | 17 | 1 |
| 7 | SDA | 242 | 10 | 30 | 1 | 162 | 6 | 24 | 1 | 69 | 3 | 4 | 0 |
| 8 | Senior typist | 43 | 2 | 3 | 0 | 23 | 1 | 3 | 0 | 8 | 0 | 0 | 0 |
| 9 | Typist | 109 | 4 | 18 | 1 | 110 | 4 | 31 | 1 | 91 | 4 | 15 | 1 |